**ಕರ್ನಾಟಕ ಸರ್ಕಾರ**
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ:27-11-2017

**ಸುತ್ತೋಲೆ**

**ವಿಷಯ** : ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳ ಕಾರ್ಯವಿಧಾನ ಕುರಿತು

**ಉಲ್ಲೇಖ** :
1) ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ವಿವಿಧ 2015 ಬೆಂಗಳೂರು ದಿನಾಂಕ 4 ಮೇ 2015
2) ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಸ್ವ-ಆರ್ಥಿಕ.ಘ/01/2015 ದಿನಾಂಕ 03-06-2016
3) ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಸ್ವ-ಆರ್ಥಿಕ.ಘ/01/2015/270 ದಿನಾಂಕ 06-08-2016
4) 2017-18ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯಮಟ್ಟದ ಸಲಹಾ ಸಮಿತಿಯ ಪ್ರಥಮ ಸಭೆಯ ನಡವಳಿಕೆಗಳು ದಿನಾಂಕ11-10-2017

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1 ಮತ್ತು 2ರ ನ್ವಯ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್‌ನಿಕ್‌ಗಳಲ್ಲಿ ಕಡ್ಡಾಯವಾಗಿ ಎನ್.ಎಸ್.ಎಸ್ ಘಟಕಗಳನ್ನು ಸ್ಥಾಪಿಸಲು ಸೂಚಿಸಲಾಗಿತ್ತು. ಈ ನಿಟ್ಟಿನಲ್ಲಿ ಪ್ರತಿ ಪಾಲಿಟೆಕ್‌ನಿಕ್‌ಗಳಲ್ಲಿ ಕನಿಷ್ಠ ಒಂದಾದರೂ ಎನ್.ಎಸ್.ಎಸ್ ಘಟಕ (ಅನುದಾನಿತ/ಸ್ವ-ಆರ್ಥಿಕ) ಸ್ಥಾಪಿಸಿ, ಒಂದು ಘಟಕಕ್ಕೆ ಒಬ್ಬ ಕಾರ್ಯಕ್ರಮಾಧಿಕಾರಿಯನ್ನು ನಿಯೋಜಿಸಿ, ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳುವುದು ಮತ್ತು ಎನ್.ಎಸ್.ಎಸ್ ತರಬೇತಿ ಹೊಂದಿಲ್ಲದ ಕಾರ್ಯಕ್ರಮಾಧಿಕಾರಿಗಳನ್ನು ತರಬೇತಿಗೆ ನಿಯೋಜಿಸುವುದು ಆಯಾ ಪಾಲಿಟೆಕ್‌ನಿಕ್‌ಗಳ ಪ್ರಾಚಾರ್ಯರ ಜವಾಬ್ದಾರಿಯಾಗಿರುತ್ತದೆ. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಕಡ್ಡಾಯವಾಗಿ ರಾಸೇಯೋ ಘಟಕ ಸ್ಥಾಪಿಸಲು ಸರ್ಕಾರಿ ಆದೇಶವಿದ್ದರೂ ಸಹ ಇನ್ನು ಹಲವು ಪಾಲಟೆಕ್ನಿಕ್‌ಗಳಲ್ಲಿ ರಾಸೇಯೋ ಘಟಕಗಳು ಸ್ಥಾಪನೆಯಾಗದಿರುವ ಕಾರಣ, ನಿರ್ದೇಶನಾಲಯವು ಸರ್ಕಾರಿ ಆದೇಶದ ಪಾಲನೆಗಾಗಿ: ಪ್ರತಿ ವರ್ಷ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಆಯಾ ಪಾಲಿಟೆಕ್‌ನಿಕ್‌ಗಳಲ್ಲಿ ರಾಸೇಯೋ ಘಟಕಗಳು ಸ್ಥಾಪನೆಯಾಗಿರುವುದನ್ನ ಖಚಿತಪಡಿಸಿಯೇ ಅನುಮತಿ ನೀಡಲು ನಿರ್ಧರಿಸಿದೆ.
ಉಲ್ಲೇಖಕ್ಕೆ 4ಕ್ಕೆ ಸಂಬಂಧಿಸಿದಂತೆ, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳು ಕೆಳಗೆ ತಿಳಿಸಿದಂತೆ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

1) ತಮ್ಮ ದೈನಂದಿನ ಚಟುವಟಿಕೆಗಳಲ್ಲಿಯೇ ಹತ್ತಿರವಿರುವ ಒಂದು ಹಳ್ಳಿ/ಜಾಗವನ್ನು ಗುರುತಿಸಿ 3 ವರ್ಷದ ವರೆಗೆ ದತ್ತು ಪಡೆಯುವುದು. ತಮ್ಮ ಕಾಲೇಜಿನ ಎನ್.ಎಸ್.ಎಸ್ ಘಟಕದ ದೂರದೃಷ್ಠಿ (Vision) ಮತ್ತು ಗುರಿಯನ್ನು (Mission) 3 ವರ್ಷಕ್ಕೆ ಸೀಮಿತಗೊಳಿಸುವಂತೆ ರೂಪಿಸುವುದು. ದತ್ತು ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಒಂದು ಫಲಕ ಇಲ್ಲವೇ ಗೋಡೆ ಬರಹದ ರೂಪದಲ್ಲಿ ಅಥವಾ ಪಾಲಿಟೆಕ್ನಿಕ್‌ನ ಆವರಣದಲ್ಲಿ ಎನ್.ಎಸ್.ಎಸ್ ಘಟಕವು(ಗಳು) ಮೂರು ವರ್ಷಗಳಲ್ಲಿ ಮಾಡಲು ಉದ್ದೇಶಿಸಿರುವ ಕಾರ್ಯಗಳ ಪಟ್ಟಿ ನಮೂದಿಸುವುದು.

2) ಒಂದು ಪಾಲಿಟೆಕ್‌ನಿಕ್‌ನಲ್ಲಿ ಒಂದಕ್ಕಿಂತ ಹೆಚ್ಚು ಎನ್.ಎಸ್.ಎಸ್ ಘಟಕಗಳಿದ್ದರೆ, ಎಲ್ಲ ಘಟಕಗಳು ಒಟ್ಟಾಗಿಯೇ ದೈನಂದಿನ ಚಟುವಟಿಕೆ ಮತ್ತು ವಿಶೇಷ ಶಿಬಿರಗಳನ್ನು ಮಾಡುವುದು. ಒಂದು ಪಾಲಿಟೆಕ್‌ನಿಕ್‌ನ ಎಲ್ಲ ಘಟಕಗಳು ಒಟ್ಟಾಗಿಯೇ ಪ್ರಾಚಾರ್ಯರು ಮತ್ತು ಎನ್ ಎಸ್ ಎಸ್ ಅಧಿಕಾರಿ (Principal and NSS officer) ಎಂಬ ಹೆಸರುಳ್ಳ ಒಂದೇ ಜಂಟಿ ಖಾತೆಯನ್ನು ತೆರೆಯುವುದು.

3) ಹೆಚ್ಚಿನ ಎನ್.ಎಸ್.ಎಸ್ ಘಟಕಗಳ ಬೇಡಿಕೆ/ಅಗತ್ಯತೆ ಇದ್ದಲ್ಲಿ ಮಾತ್ರವೇ ಸ್ವ-ಆರ್ಥಿಕ ಘಟಕಗಳನ್ನ ಸ್ಥಪಿಸುವುದು ಮತ್ತು ಆ ಘಟಕಗಳ ನಿರ್ವಹಣೆಗಾಗಿಯೇ ಪ್ರತಿ ವರ್ಷ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಎನ್.ಎಸ್.ಎಸ್ ಶುಲ್ಕವನ್ನು ಪಡೆಯುವುದು. ಎನ್.ಎಸ್.ಎಸ್ ಶುಲ್ಕವನ್ನು ಪಡೆದು ಸ್ವ-ಆರ್ಥಿಕ ಘಟಕವನ್ನು(ಗಳನ್ನು) ಸ್ಥಾಪಿಸದೇ ಇರುವುದು ಉಲ್ಲೇಖ 1 ಮತ್ತು 2 ರ ಉಲ್ಲಂಘನೆಯಾಗುವುದು ಮತ್ತು ಸದರಿ ಹೊಣೆಗಾರಿಕೆಯನ್ನು ಪ್ರಾಚಾರ್ಯರೇ ಹೊರಬೇಕಾಗುತ್ತದೆ. ಸ್ವ-ಆರ್ಥಿಕ ಘಟಕದ ಆರ್ಥಿಕ ವಿಂಗಡನೆಯು ಉಲ್ಲೇಖ 3 ರಲ್ಲಿ ತಿಳಿಸಿದಂತೆ ಇರುತ್ತದೆ.

ಮು.ತಿನೋ.

4) ತಮ್ಮ ದೈನಂದಿನ ಚಟುವಟಿಕೆಗಳ ಅಡಿಯಲ್ಲಿಯೇ ದತ್ತು ಗ್ರಾಮ ಅಥವಾ ಸ್ಥಳದ ಬೇಡಿಕೆಗಳ ಪಟ್ಟಿಯನ್ನು (wish list) ತಯಾರಿಸುವುದು ಮತ್ತು ಅದರಲ್ಲಿ ಎನ್.ಎಸ್.ಎಸ್ ಸ್ವಯೋಸೇವಕರಿಂದ ಮಾಡಬಹುದಾದ ತಾಂತ್ರಿಕ ಸೇವೆಗಳನ್ನು ಗುರುತಿಸಿ ಅದರ ಕ್ರಿಯಾ ಯೋಜನೆ (Action plan) ಸಿದ್ಧಪಡಿಸುವುದು. ನಂತರ ಸದರಿ ಕ್ರಿಯಾಯೋಜನೆಯಂತೆಯೇ ಅಂತಿಮ ವರ್ಷದ ವಿದ್ಯಾರ್ಥಿಗಳೊಂದಿಗೆ ಕನಿಷ್ಠ ಒಂದಾದರೂ ಸಮಾಜಮುಖಿ ಯೋಜನೆ (Final year Project) ಪ್ರತಿ ಪಾಲಿಟೆಕ್‌ನಿಂದ ರೂಪಿಸುವುದು, ಅದನ್ನು ವಿಶೇಷ ಶಿಬಿರಗಳಲ್ಲಿ ಅನುಷ್ಠಾನಕ್ಕೆ ತರುವುದು. ಅಂತಹ ಯೋಜನೆಗಳ ವಿವರಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು.

5) ಗ್ರಾಮೀಣಾಭಿವೃದ್ಧಿಯ ದೃಷ್ಟಿಯಿಂದ ಎನ್‌ಎಸ್‌ಎಸ್ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಜಾರಿಗೆತರುವುದು: ಶ್ರಮದಾನದ ಜೊತೆಗೆ ಪರಿಸರ/ಆರೋಗ್ಯ/ಕಾನೂನು ಅರಿವು ಕಾರ್ಯಕ್ರಮಗಳು, ಸೌರ್ಯ ಶಕ್ತಿ, ವಾಯು ಶಕ್ತಿ, ನೆಲ ಹಾಗೂ ಜಲ ಸಂರಕ್ಷಣೆ, ಶೌಚಾಲಯಗಳ ನಿರ್ಮಾಣ, ಹೊಗೆ ರಹಿತ ಒಲೆಗಳ ನಿರ್ಮಾಣ, ಶಾಲಾ/ಕಾಲೇಜು ಆಟದ ಮೈದಾನ, ಕಾಂಪೌಂಡ್ ನಿರ್ಮಾಣ ಕಾರ್ಯಗಳು ಹಾಗೂ ವಿದ್ಯುತ್ ಉಪಕರಣಗಳ/ಯಾಂತ್ರಿಕ ಉಪಕರಣಗಳ ದುರಸ್ತಿ ಕಾರ್ಯಗಳನ್ನು, ಗೃಹ ಉಪಯೋಗಿ ಉಪಕರಣಗಳ/ವ್ಯವಸಾಯ ಉಪಯೋಗಿ ಉಪಕರಣಗಳ ದುರಸ್ತಿ, ಇನ್ನಿತರ ಯಾವುದೇ ತಾಂತ್ರಿಕ ಜ್ಞಾನವನ್ನೊಳಗೊಂಡ ಸೇವೆಯನ್ನು ಜಾಗೃತಿ ಮೂಡಿಸುವ ರೂಪದಲ್ಲಿ ಅಥವಾ ಪಂಚಾಯತ್ ಸರ್ಕಾರಿ/ಅರೆಸರ್ಕಾರಿ/ ಸರ್ಕಾರೇತರ ಸಂಘಗಳ/ ಗ್ರಾಮೀಣ ಜನರ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಕಾರ್ಯಗಳನ್ನು ನಡೆಸುವುದು.

6) ವಿಶೇಷ ಶಿಬಿರಗಳನ್ನು ಮೂರುವರ್ಷಗಳ ವರೆಗೆ ದತ್ತು ಪಡೆದ ಒಂದೇ ಗ್ರಾಮದಲ್ಲಿ ಆಯೋಜಿಸಿ ಮೇಲೆ ತಿಳಿಸಿರುವ ಕಾರ್ಯಗಳನ್ನು ಅನುಷ್ಠಾನಗೊಳಿಸಿ 3 ವರ್ಷದಲ್ಲಿ ಎಲ್ಲಾ ಕಾರ್ಯಗಳು ಪೂರ್ಣವಾಗುವಂತೆ ನೋಡಿಕೊಳ್ಳುವುದು.

7) ಅನುದಾನಿತ ಘಟಕಗಳು: ಏಪ್ರಿಲ್ ತಿಂಗಳಿನಲ್ಲಿಯೇ ಪೂರ್ಣ ಪ್ರಮಾಣದ ಲೆಕ್ಕ ಪತ್ರಗಳನ್ನು ಧೃಢಿಕರಿಸಿ, ದೈನಂದಿನ ಚಟುವಟಿಕೆ ಹಾಗೂ ವಿಶೇಷ ಶಿಬಿರಕ್ಕೆ ಪ್ರತ್ಯೇಕವಾಗಿ ವಿವರವಾದ (spiral bind/hard bind) ವರದಿಗಳನ್ನು ತಯಾರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

8) ಸ್ವ ಆರ್ಥಿಕ ಘಟಕಗಳು: ಪೂರ್ಣ ಪ್ರಮಾಣದ ಲೆಕ್ಕ ಪತ್ರಗಳನ್ನು ತಮ್ಮ ಸಂಸ್ಥೆ ಹಂತದಲ್ಲಿಯೇ ಲೆಕ್ಕ ಪರಿಶೋಧಕರಿಂದ ತಪಾಸನೆ ಮಾಡಿಸಿ ಉಪಯೋಗಿತ ಪ್ರಮಾಣಪತ್ರವನ್ನು ಮತ್ತು ವಾರ್ಷಿಕ ವರದಿಯನ್ನು ಏಪ್ರಿಲ್ ತಿಂಗಳಿನಲ್ಲಿಯೇ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

9) ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಬರುವ ಆದೇಶಗಳನ್ನು ಪಾಲಿಸುವುದು.

ಈ ಮೇಲಿನ ಅಂಶಗಳೊಂದಿಗೆ ಪ್ರತಿ ಪಾಲಿಟೆಕ್‌ನಿಕ್‌ಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿಗಳು:

1. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು–04.
3. ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಚಾರ್ಯಗಳಿಗೆ–ಸೂಕ್ತ ಕ್ರಮಕ್ಕಾಗಿ.
4. ಇ–ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
5. ಕಚೇರಿ ಕಡತಕೆ.